# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 900

ಉತ್ತರಿಸಬೇಕಾದ ದಿನಾಂಕ : 17.12.2024

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಡಿ.ಸಿ.ಸಿ ಬ್ಯಾಂಕುಗಳಲ್ಲಿ ಭಾರಿ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು |
| ಆ) | ಕೋಲಾರ-ಚಿಕ್ಕಬಳ್ಳಾಪುರ ಕೇಂದ್ರ ಸಹಕಾರ ಬ್ಯಾಂಕ್‌ನ ವಿವಿಧ ಶಾಖೆಗಳಲ್ಲಿ ಸುಮಾರು 9.86 ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿರುವುದು ನಿಜವೇ: ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು: | ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿಸಿಸಿ ಬ್ಯಾಂಕಿನ ಗುಡಿಬಂಡೆ ಶಾಖೆಯಲ್ಲಿ 2023-24ನೇ ಹಣಕಾಸು ವರ್ಷದಲ್ಲಿ ರೂ.1.96 ಕೋಟಿ ನಗದು ಹಣ ದುರುಪಯೋಗವಾಗಿರುವುದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64 ರ ಶಾಸನಸಬದ್ಧ ವಿಚಾರಣೆಯಿಂದ ದೃಢಪಟ್ಟಿರುತ್ತದೆ.<br><br>ಡಿ.ಸಿ.ಸಿ. ಬ್ಯಾಂಕಿನ ಕೋಲಾರ, ಕೆ.ಜಿ.ಎಫ್ ಮತ್ತು ಚಿಂತಾಮಣಿ ಶಾಖೆಗಳಲ್ಲಿ 2020-21 ಮತ್ತು 2021-22ನೇ ಹಣಕಾಸು ವರ್ಷದಲ್ಲಿ ಒಟ್ಟು ರೂ.7.89 ಕೋಟಿಗಳಷ್ಟು ಬಡ್ಡಿ ಸಹಾಯಧನ ದುರ್ಬಳಕೆಯಾಗಿರುವುದು ಬ್ಯಾಂಕಿನ ಕೇಂದ್ರ ಕಛೇರಿಯ ಅಧಿಕಾರಿಗಳು ನಡೆಸಿದ ಆಂತರಿಕ ಪರಿವೀಕ್ಷಣೆಯಿಂದ ಬೆಳಕಿಗೆ ಬಂದಿರುತ್ತದೆ. ಶಾಖಾವಾರು ದುರ್ಬಳಕೆಯಾಗಿರುವ ಮೊತ್ತದ ವಿವರ ಈ ಕೆಳಗಿನಂತಿದೆ.<br>ಕೋಲಾರ ಶಾಖೆ: 1.49 ಕೋಟಿ<br>ಕೆ.ಜಿ.ಎಫ್ ಶಾಖೆ: 4.17 ಕೋಟಿ<br>ಚಿಂತಾಮಣಿ ಶಾಖೆ: 2.23 ಕೋಟಿ<br>ಇಲಾಖೆ ಹಾಗೂ ಬ್ಯಾಂಕಿನ ಹಂತದಲ್ಲಿ ತೆಗೆದುಕೊಂಡಿರುವ ಕ್ರಮಗಳು:<br><br>➢ ಹಣದುರುಪಯೋಗ / ದುರ್ಬಳಕೆಗೆ ಕಾರಣರಾದ ಶಾಖಾ ವ್ಯವಸ್ಥಾಪಕರು, ನಗದು ಗುಮಾಸ್ತರು ಮತ್ತು ಮೇಲ್ವಿಚಾರಕರು ಸೇರಿ 9 ಸಿಬ್ಬಂದಿಗಳನ್ನು ಶಿಸ್ತು ವಿಚಾರಣೆಗೆ ಕಾಯ್ದಿರಿಸಿ ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ. |

- ಗುಡಿಬಂಡೆ ಶಾಖೆಯಲ್ಲಿ ನಡೆದಿರುವ ರೂ.1.96 ಕೋಟಿ ಹಣದುರುಪಯೋಗಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಕಲಂ 64 ರಡಿ ಶಾಸನಬದ್ಧ ವಿಚಾರಣೆಗೆ ಇಲಾಖೆಯಿಂದ ದಿನಾಂಕ: 12.03.2024 ರಂದು ಆದೇಶಿಸಿದ್ದು, ವಿಚಾರಣಾ ವರದಿ ಸಲ್ಲಿಸಲಾಗಿದ್ದು, ಸದರಿ ವರದಿಯನ್ನು ಆಧರಿಸಿ ಕಲಂ 68 ರಡಿ ಶಾಸನಬದ್ಧ ನಿರ್ದೇಶನವನ್ನು ದಿನಾಂಕ: 16.11.2024 ರಂದು ಹೊರಡಿಸಲಾಗಿದೆ.

ಗುಡಿಬಂಡೆ ಶಾಖೆಗೆ ಸಂಬಂಧಿಸಿದಂತೆ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧನೆಯಲ್ಲಿ ಹಾಗೂ ಕಲಂ 64 ರ ಶಾಸನಬದ್ಧ ವಿಚಾರಣೆಯಿಂದ ದೃಢಪಟ್ಟಿರುವ ದುರುಪಯೋಗದ ಮೊತ್ತ ರೂ 1.96 ಕೋಟಿಗಳ ವಸೂಲಾತಿಗೆ ಸಹಕಾರ ಸಂಘಗಳ ಜಂಟಿ ನಿಬಂಧಕರ ನ್ಯಾಯಾಲಯ, ಬೆಂಗಳೂರು ಪ್ರಾಂತ ಇವರಲ್ಲಿ ಕಲಂ 70 ರಡಿ ದಾವೆ ಹೂಡಲಾಗಿದೆ.

ವ್ಯವಸ್ಥಾಪಕರು ಮತ್ತು ನಗದು ಗುಮಾಸ್ತರ ಹೆಸರಿನಲ್ಲಿರುವ / ಪತ್ನಿಯ ಹೆಸರಿನಲ್ಲಿರುವ ಸ್ಥಿರ ಆಸ್ತಿಗಳನ್ನು ಕಲಂ 103 ರಡಿ ಆದೇಶ ಪೂರ್ವ ಜಪ್ತಿ ಆದೇಶವನ್ನು ದಿನಾಂಕ:13.03.2024 ರಂದು ನ್ಯಾಯಾಲಯದಿಂದ ಹೊರಡಿಸಲಾಗಿರುತ್ತದೆ. ದಾವಾ ಪ್ರಕರಣ ಮುಂದುವರೆದಿದೆ.

ಗುಡಿಬಂಡೆ ಶಾಖೆಯ ವ್ಯವಸ್ಥಾಪಕರು ಮತ್ತು ನಗದು ಗುಮಾಸ್ತರ ವಿರುದ್ಧ ಗುಡಿಬಂಡೆ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಿನಾಂಕ:16.02.2024 ರಂದು ದಾಖಲಿಸಲಾಗಿದ್ದು, ಅಪರಾಧ ಸಂಖ್ಯೆ 0026/2024 ಆಗಿರುತ್ತದೆ.

ಶ್ರೀ.ಎನ್.ಸುವರ್ಣಮೂರ್ತಿ, ವ್ಯವಸ್ಥಾಪಕರು ಮತ್ತು ಶ್ರೀ.ಬಿ.ಎ.ಅನಿಲ್ ಕುಮಾರ್, ನಗದು ಗುಮಾಸ್ತರು ಇವರ ವಿರುದ್ಧದ ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ.

- ಕೋಲಾರ, ಕೆ.ಜಿ.ಎಫ್ ಮತ್ತು ಚಿಂತಾಮಣಿ ಶಾಖೆಯಲ್ಲಿ ನಡೆದಿದೆ ಎನ್ನಲಾದ ಬಡ್ಡಿ ಸಹಾಯಧನ ದುರ್ಬಳಕೆಯ ಕುರಿತಂತೆ ಸಕ್ಷಮ ಪ್ರಾಧಿಕಾರವು ಕಲಂ 65 ರಡಿ ಶಾಸನಬದ್ಧ ಪರಿವೀಕ್ಷಣೆಗೆ ದಿನಾಂಕ:14.08.2024 ರಂದು ಆದೇಶ ಹೊರಡಿಸಲಾಗಿದೆ.

| | | |
|---|---|---|
| | | ಕೋಲಾರ, ಕೆ.ಜಿ.ಎಫ್ ಮತ್ತು ಚಿಂತಾಮಣಿ ಶಾಖೆಗಳಲ್ಲಿ ದುರ್ಬಳಕೆಯಾಗಿರುವ ಒಟ್ಟು ಮೊತ್ತ ರೂ 7.89 ಕೋಟಿಗಳ ಪೈಕಿ ರೂ 1.86 ಕೋಟಿಯಷ್ಟು ನಗದು ಹಣ ಸಂಬಂಧಪಟ್ಟವರಿಂದ ವಸೂಲಿ ಮಾಡಲಾಗಿದೆ.<br><br>ಮುಂದುವರೆದು ಬ್ಯಾಂಕಿನ ಗುಡಿಬಂಡೆ ಶಾಖೆಯಲ್ಲಿ ರೂ. 1,95,12,552-00 ಗಳ ಹಣ ದುರುಪಯೋಗವಾಗಿರುವ ಕುರಿತು ಬ್ಯಾಂಕಿನ ಆಂತರಿಕ ಪರಿವೀಕ್ಷಣೆಯಿಂದ ಕಂಡುಬಂದಿದ್ದು, ಬ್ಯಾಂಕಿನ ವರದಿಯ ಆಧಾರದಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64 ರಡಿ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ವಿಚಾರಣಾ ವರದಿಯು ದಿನಾಂಕ:18-09-2024 ರಂದು ಸ್ವೀಕೃತವಾಗಿದ್ದು, ಸದರಿ ವರದಿಯ ಮೇಲೆ ಬ್ಯಾಂಕು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಶಾಸನಬದ್ಧ ನಿರ್ದೇಶನಗಳನ್ನು ನೀಡಿ ದಿನಾಂಕ:16-11-2024 ರಂದು ಕಲಂ 68ರ ಆದೇಶ ಹೊರಡಿಸಲಾಗಿರುತ್ತದೆ. ಬ್ಯಾಂಕಿನ ಸಿಬ್ಬಂದಿಗಳಾದ ಶ್ರೀ ಎನ್. ಸುವರ್ಣ ಮೂರ್ತಿ ಹಾಗೂ ಶ್ರೀ ಅನಿಲ್‌ಕುಮಾರ್ ಬಿ.ಎ. ರವರುಗಳನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿರುತ್ತದೆ. ಕ್ರಿಮಿನಲ್ ಮೊಕದ್ದಮೆಯನ್ನು ಸಹ ದಾಖಲಿಸಲಾಗಿರುತ್ತದೆ. ದುರುಪಯೋಗದ ಮೊತ್ತದ ವಸೂಲಾತಿಗಾಗಿ ಜೆಆರ್‌ಬಿ/ಅಧಿಬಾರ/02/2023-24 ರನ್ವಯ ಪ್ರಕರಣ ದಾಖಲಾಗಿದ್ದು, ಸದರಿಯವರ ಸ್ಥಿರಾಸ್ತಿಗಳನ್ನು ಆದೇಶ ಪೂರ್ವ ಜಪ್ತಿಗೆ ಒಳಪಡಿಸಲಾಗಿರುತ್ತದೆ. ವಿಚಾರಣೆಯು ಪ್ರಗತಿಯಲ್ಲಿರುತ್ತದೆ.<br><br>ಮುಂದುವರೆದು ಶ್ರೀ.ಟಿ.ಎಸ್. ಪ್ರತಾಪ್ ಕುಮಾರ್ ಎಂಬುವರು ದಿನಾಂಕ: 18-10-2024 ರಂದು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರಿಗೆ ದೂರು ಸಲ್ಲಿಸಿ, ಬ್ಯಾಂಕಿನ ಬಾಗೇಪಲ್ಲಿ ಶಾಖೆಯಲ್ಲಿನ ವ್ಯವಸ್ಥಾಪಕರಾದ ಶ್ರೀ ಚೇತನ್ ಕೆ ಇವರು ಸದರಿ ಶಾಖೆಯಲ್ಲಿ ಕೆ.ಸಿ.ಸಿ. ಸಾಲ ಹಾಗೂ ಎಸ್‌ಹೆಚ್‌ಜಿ ಸಾಲಗಳನ್ನು ನೀಡಿದ್ದು, ಈ ಸಾಲಗಳು ರೈತರಿಗೆ ಹಾಗೂ ಮಹಿಳಾ ಸಂಘಗಳಿಗೆ ವಿತರಣೆಯಾಗಿರುವುದಿಲ್ಲವೆಂದು ಹಾಗೂ ದಿನಾಂಕ:07-09-2021 ರಂದು 10 ಲಕ್ಷ ಬೋಗಸ್ ಚಲನ್ ಹಾಕಿ ನಂತರ ಹಣ ಡ್ರಾ ಮಾಡಿರುತ್ತಾರೆ ಹಾಗೂ ಅವರ ತಾಯಿ ಮತ್ತು ಬಾವಮೈದನ ಇವರುಗಳ ಖಾತೆಗೆ ಹಣ ವರ್ಗಾವಣೆ ಮಾಡಿ ಡ್ರಾ ಮಾಡಿರುತ್ತಾರೆಂದು ದೂರು ನೀಡಿದ್ದು, ಸದರಿ ದೂರಿನಲ್ಲಿನ ಅಂಶಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸಹಕಾರ ಸಂಘಗಳ ಉಪ ನಿಬಂಧಕರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರನ್ನು ದಿನಾಂಕ: 29-10-2024 ರಂದು ನಿಯೋಜಿಸಲಾಗಿರುತ್ತದೆ. ವರದಿಯನ್ನು ನಿರೀಕ್ಷಿಸಲಾಗುತ್ತಿದೆ. |

| | | |
|---|---|---|
| ಇ) | ಕಳೆದ 5 ವರ್ಷಗಳ ಅವಧಿಯಿಂದ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಡಿ.ಸಿ.ಸಿ. ಬ್ಯಾಂಕುಗಳಿಂದ ನೀಡಲಾಗಿರುವ ಸಾಲದ ಮೊತ್ತವೆಷ್ಟು; ಹಾಗೂ ಇದರಲ್ಲಿ ವಸೂಲಿಯಾಗಿರುವ ಹಣವೆಷ್ಟು; ಬಾಕಿ ಬರಬೇಕಾಗಿರುವ ಹಣವೆಷ್ಟು (ಸಂಪೂರ್ಣ ಮಾಹಿತಿ ನೀಡುವುದು) | ಕಳೆದ 5 ವರ್ಷಗಳ ಅವಧಿಯಿಂದ ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿ.ಸಿ.ಸಿ ಬ್ಯಾಂಕಿನಿಂದ ನೀಡಲಾಗಿರುವ ಸಾಲದ ಮೊತ್ತ ಮತ್ತು ವಸೂಲಿಯಾಗಿರುವ ಸಾಲದ ವರ್ಷವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಈ) | ದೊಡ್ಡ ಮೊತ್ತದ ಹಣ ದುರುಪಯೋಗಪಡಿಸಿಕೊಂಡ ಅಧಿಕಾರಿ ಹಾಗೂ ಸಿಬ್ಬಂದಿಗಳಿಂದ ನಷ್ಟದ ಹಣವನ್ನು ಹಿಂಪಡೆಯಲು ಯಾವುದಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ? | ಡಿಸಿಸಿ ಬ್ಯಾಂಕುಗಳಲ್ಲಿನ ಹಣದುರುಪಯೋಗ ಪ್ರಕರಣಗಳಲ್ಲಿ ಅವಶ್ಯಕತೆ ಅನುಸಾರವಾಗಿ ಜವಾಬ್ದಾರಿಯನ್ನು ನಿಗಧಿಪಡಿಸಲು ಶಾಸನಬದ್ಧ ಸಹಕಾರ ಸಂಘಗಳ ಕಾಯ್ದೆ ಕಲಂ 64 ರ ವಿಚಾರಣೆ ಮತ್ತು ಪರಿವೀಕ್ಷಣೆಯನ್ನು ಕೈಗೊಳ್ಳಲು ಕ್ರಮವಿಡಲಾಗಿದೆ ಮತ್ತು ದುರುಪಯೋಗ ಪಡಿಸಿಕೊಂಡಿರುವ ವ್ಯಕ್ತಿಗಳಿಂದ ರೂ.1.86 ಕೋಟಿ ವಸೂಲಿ ಮಾಡಿದೆ. ಹಣ ದುರುಪಯೋಗ ಮಾಡಿದ ವ್ಯವಸ್ಥಾಪಕ/ನಗದು ಗುಮಾಸ್ತರ ಸ್ಥಿರಾಸ್ತಿಗಳನ್ನು ಕಲಂ 103 ರಡಿ ಆದೇಶ ಪೂರ್ವ ಜಪ್ತಿ ಆದೇಶವನ್ನು ದಿನಾಂಕ:13-03-2024 ರಂದು ನ್ಯಾಯಾಲಯದಿಂದ ಹೊರಡಿಸಿದೆ. ಗುಡಿಬಂಡೆ ವ್ಯವಸ್ಥಾಪಕರು ಮತ್ತು ನಗದು ಗುಮಾಸ್ತರ ವಿರುದ್ಧ ಗುಡಿಬಂಡೆ ಪೊಲೀಸ್ ಠಾಣೆಯಲ್ಲಿ ದಿನಾಂಕ:16-02-2024 ರಂದು ಸಿ.ಸಿ. ನಂ: 0026/2024 ರಂತೆ ಪ್ರಕರಣವನ್ನು ದಾಖಲಿಸಲಾಗಿದೆ. |

**ಸಂಖ್ಯೆ: ಸಿಒ 304 ಸಿಎಲ್ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು